ಆ) ಹುಬ್ಬಳ್ಳಿ ಧಾರವಾಡ ಕಾರ್ಪೊರೇಷನ್‌ದವರು ಈ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಬೇಕಾಗುವ ಜಾಗೆಯನ್ನು ವಶಪಡಿಸಿಕೊಂಡು ಒದಗಿಸಿರುವರು. (ಸುಮಾರು ೩೬೯ ಎಕರೆ ಜಮೀನು).

ಇ) ಈ ಮೊದಲು ಕರ್ನಾಟಕ ರಾಜ್ಯ ಸರ್ಕಾರದವರು ವಾಯುದೂತ ವಿಮಾನಯಾನಕ್ಕೆ ತಕ್ಕಂತೆ ಅಂದಾಜು ಪತ್ರಿಕೆ ೯೯.೮೭ ಲಕ್ಷ ರೂ.ಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿದ್ದರು. ಆ ಪ್ರಕಾರ ಕೆಲಸವು ಮುಗಿಯುತ್ತಾ ಬಂದಂತೆ ಸೆಪ್ಟೆಂಬರ್ ೮೮ರಲ್ಲಿ ಸದರಿ ವಿಮಾನ ನಿಲ್ದಾಣವನ್ನು ಬೋಯಿಂಗ್ ವಿಮಾನಯಾನಕ್ಕಾಗಿ ಹಂತ ಹಂತವಾಗಿ ವಿಸ್ತರಿಸಲು ರೂಪಾಯಿ ೧೫೦ ಲಕ್ಷಗಳಿಗೆ ಮತ್ತೆ ಆಡಳಿತಾತ್ಮಕ ಮಂಜೂರಾತಿ ನೀಡಿರುವರು. ಈ ಕೆಲಸವು ಸಹ ಪ್ರಗತಿಯಲ್ಲಿರುತ್ತದೆ. ಹಾಗೂ ಸದರಿ ವಿಮಾನ ನಿಲ್ದಾಣ ನಿರುಪಯುಕ್ತವಾಗುವುದಿಲ್ಲ.

ಪಡಿತರ ಪದ್ಧತಿಯ ಬಗ್ಗೆ

೧೪೮. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಆ) ರಾಜ್ಯದ ಎಷ್ಟು ಪಟ್ಟಣಗಳಲ್ಲಿ ಪಡಿತರ ಪದ್ಧತಿಯ ಮೂಲಕ ಆಹಾರವನ್ನು ಒದಗಿಸಲಾಗುತ್ತಿದೆ ;

ಆ) ಇದನ್ನು ಇತರ ಪಟ್ಟಣಗಳಿಗೆ ವಿಸ್ತರಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ ;

ಇ) ರಾಜ್ಯದಲ್ಲಿ ಹಸಿರು ಕಾರ್ಡುಗಳನ್ನು ಹೊಂದಿರುವವರ ಸಂಖ್ಯೆ ಎಷ್ಟು ;

ಈ) ಹಸಿರು ಕಾರ್ಡುಗಳನ್ನು ವಿಸ್ತರಿಸುವ ಯೋಜನೆ ಸರ್ಕಾರದ ಮುಂದಿದೆಯೇ ;

ಶ್ರೀ ಅಜೀಜ್ ಸೇಠ್ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ೫೦,೦೦೦ ಅಥವಾ ಅದಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಎಲ್ಲಾ ಪಟ್ಟಣಗಳು.

ಆ) ಇಲ್ಲ.

ಇ) ೩೧,೧೩,೫೭೩

ಈ) ಇಲ್ಲ.

ರಾಜ್ಯ ಸಾರಿಗೆ ಸಂಸ್ಥೆಯ ಆಸ್ತಿಯ ಬಗ್ಗೆ

೧೪೯. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಬೆಂಗಳೂರು ಕೆಂಗೇರಿ ಸವಿೂಪದಲ್ಲಿ ರಾಜ್ಯ ಸಾರಿಗೆ ಸಂಸ್ಥೆಯ ಆಸ್ತಿ ಏನಾದರೂ ಇದೆಯೇ ;

ಆ) ಇದ್ದಲ್ಲಿ ಈ ಆಸ್ತಿಯನ್ನು ಕೊಂಡಿದ್ದು ಯಾವಾಗ ಮತ್ತು ಯಾವ ಉದ್ದೇಶಕ್ಕಾಗಿ ;

ಇ) ಇದನ್ನು ಖಾಸಗಿಯವರಿಗೆ ವಿತರಣೆ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಸಚಿವರು).—

ಅ) ಇದೆ

ಆ) ಬೆಂಗಳೂರಿನ ಪ್ರಾದೇಶಿಕ ಕಾರ್ಯಾಗಾರಗಳನ್ನು ಕೆಂಗೇರಿಗೆ ವರ್ಗಾಯಿಸುವ ಉದ್ದೇಶಕ್ಕಾಗಿ ದಿನಾಂಕ ೭-೬-೮೫ರಲ್ಲಿ ಕರ್ನಾಟಕ ಸ್ಟೀಲ್ಸ್ ಮತ್ತು ವೈರ್ಸ್ ಅವರ ಆಸ್ತಿಯನ್ನು ಸ್ವಾಧೀನ ತೆಗೆದುಕೊಳ್ಳಲಾಯಿತು.

ಇ) ಇಲ್ಲ.